ಕೋಲಾರ ಜಿಲ್ಲೆಗೆ ಸರಬರಾಜು ಮಾಡಿದ್ದ ಮಣ್ಣು ಮಿಶ್ರಿತ ಬೇವಿನ ಹಿಂಡಿ ಗುಣಮಟ್ಟ ಕುರಿತು

2368 (2866) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಗೆ ತೆಂಗಿನ ಮರಗಳ ನುಸಿಪೀಡೆ ನಿಯಂತ್ರಣ ಸಲುವಾಗಿ ಮಣ್ಣು ಮಿಶ್ರಿತ ಬೇವಿನ ಹಿಂಡಿ ಸರಬರಾಜು ಮಾಡಿದ್ದ ಕಂಪನಿ ಯಾವುದು;

ಆ) ಎಷ್ಟು ಚೀಲ ಹಿಂಡಿಯನ್ನು ಸರಬರಾಜು ಮಾಡಲಾಗಿತ್ತು; ಇದಕ್ಕಾಗಿ ಪಾವತಿಸಿದ ಹಣ ಎಷ್ಟು;

ಇ) ತೆಂಗಿನ ಮರಗಳ ನುಸಿಪೀಡೆ ನಿಯಂತ್ರಣದ ಸಲುವಾಗಿ ಸರಬರಾಜು ಮಾಡಿದ್ದ ಮಣ್ಣು ಮಿಶ್ರಿತ ಬೇವಿನ ಹಿಂಡಿಯ ಗುಣಮಟ್ಟ ಸರಿಯಾಗಿಲ್ಲದಿರುವುದು ನಿಜವೇ;

ಈ) ಈ ಪ್ರಕರಣದಲ್ಲಿ ಕಂಪನಿ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಕೋಲಾರ ಜಿಲ್ಲೆಯನ್ನು ಹೊರತು ಪಡಿಸಿ ಇತರೆ ಜಿಲ್ಲೆಗಳಲ್ಲಿಯೂ ಈ ರೀತಿಯ ಪ್ರಕರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಕೋಲಾರ ಜಿಲ್ಲೆಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಮಣ್ಣು ಮಿಶ್ರಿತ ಬೇವಿನ ಹಿಂಡಿಯನ್ನು ಮೆ: ಕೆ.ಜಿ.ಎನ್. ಆಯಿಲ್ ಇಂಡಸ್ಟ್ರೀಸ್, ನಗರಂಗೆರೆ, ಬೆಂಗಳೂರು ರಸ್ತೆ ಚಳ್ಳಕೆರೆ, ಚಿತ್ರದುರ್ಗ ರವರು ಸರಬರಾಜು ಮಾಡಿರುತ್ತಾರೆ.

ಅ) ಕೋಲಾರ ಜಿಲ್ಲೆಗೆ 114.8585 ಟನ್ ಬೇವಿನ ಹಿಂಡಿ ಸರಬರಾಜಾಗಿರುತ್ತದೆ ಹಾಗೂ ಇದಕ್ಕಾಗಿ ರೂ. 3.58 ಲಕ್ಷ ಹಣವನ್ನು ಪಾವತಿಸಲಾಗಿದೆ.

ಇ) ಕೋಲಾರ ಜಿಲ್ಲೆಯಲ್ಲಿ ಸರಬರಾಜಾದ ಮಣ್ಣು ಮಿಶ್ರಿತ ಬೇವಿನ ಹಿಂಡಿಯ ಗುಣಮಟ್ಟ ಸರಿಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೋಲಾರ ಜಿಲ್ಲೆಗೆ ಸರಬರಾಜಾದ ಬೇವಿನ ಹಿಂಡಿಯ ಮಾದರಿಗಳನ್ನು ಪಡೆದು ಕೃಷಿ ವಿಶ್ವವಿದ್ಯಾನಿಲಯ, ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ (ಐಐಹೆಚ್ಆರ್) ಮತ್ತು ಹುಳಿಮಾವಿನಲ್ಲಿರುವ ಬಯೋಟೆಕ್ನಾಲಜಿ ಕೇಂದ್ರಗಳಿಗೆ ವಿಶ್ಲೇಷಣೆಗಾಗಿ ಕಳುಹಿಸಲಾಗಿರುತ್ತದೆ. ಸದರಿ ಕಂಪನಿಯಿಂದ ಸರಬರಾಜಾಗಿ ಹಣ ಪಾವತಿ ಮಾಡದೇ ಉಳಿಕೆಯಾಗಿರುವ ಬೇವಿನ ಹಿಂಡಿಗೆ ಹಣ ಪಾವತಿ ಮಾಡದಂತೆ ಸೂಚನೆ ನೀಡಲಾಗಿದೆ. ಇದರ ಬಗ್ಗೆ ತನಿಖೆ ನಡೆಸಲು ತಾಂತ್ರಿಕ ಸಮಿತಿ ರಚಿಸಲಾಗಿದ್ದು, ತನಿಖೆಯು ನಡೆಯುತ್ತಿದೆ. ಈ ವರದಿಗಳನ್ನು ಪಡೆದು ಸದರಿ ಕಂಪನಿಯ ವಿರುದ್ಧ ಸೂಕ್ತ ಕಾನೂನಿನ ಕ್ರಮ ವಹಿಸಲಾಗುವುದು.

ಉ) ದೂರು ಬಂದಿದ್ದು, ಪರಿಶೀಲನೆಯಲ್ಲಿದೆ.

ಯಶಸ್ವಿನಿ ಆರೋಗ್ಯ ವಿಮೆ ಯೋಜನೆ

2374 (2966) : ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?